ಅಸಲು ದಾವೆ ನಂ.60/2015

ಡಿ.ಡಬ್ಲೂಃ 1- ಶಂಕರ್ ರೆಡ್ಡಿ ಬಿನ್ ಚಿಕ್ಕ ತಿಪ್ಪಾ ರೆಡ್ಡಿ

ಆದೇಶ ದಿನಾಂಕ **20/02/2026** ರ ಮೇರೆಗೆ ಇಂದು ದಿನಾಂಕಃ 12/03/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿಯರ ಪರವಾಗಿ ಶ್ರೀ ಎಸ್ ಆರ್ ವಕೀಲರಿಂದ**

4. ನಾನು 1971 ರಲ್ಲಿ ಹುಟ್ಟಿರುತ್ತೇನೆ. ನನಗೆ ನಿಡಿ-2 ಕ್ರಯ ಪತ್ರದ ಬಗ್ಗೆ ಮಾಹಿತಿ ಇರುತ್ತದೆ ಕಾರಣ ನಮ್ಮ ತಂದೆಯು ನನಗೆ ಅದರ ಬಗ್ಗೆ ಹೇಳಿರುತ್ತಾರೆ. ನನಗೆ ಸದರಿ ಕ್ರಯ ಪತ್ರದ ಬಗ್ಗೆ ವ್ಯಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ ಕ್ರಯ ಪತ್ರ ಆಗುವ ಸಮಯದಲ್ಲಿ ನಮ್ಮ ಕುಟುಂಬದಲ್ಲಿ ನಮ್ಮ ತಾತ ಗುರುವಾ ರೆಡ್ಡಿ, ನಮ್ಮ ಅಜ್ಜಿ ದುರ್ಗಮ್ಮ, ನಮ್ಮ ತಂದೆ ಚಿಕ್ಕ ತಿಪ್ಪಾರೆಡ್ಡಿ, ನಮ್ಮ ತಾಯಿ ವೆಂಕಟಮ್ಮ, 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಇದ್ದರು ಎಂದರೆ ನಮ್ಮ ತಾತವನ್ನು ಹೊರತು ಪಡಿಸಿ ಬೇರೆಯವರೆಲ್ಲರೂ ಇದ್ದರು ಎಂದು ನುಡಿಯುತ್ತಾರೆ. ನಮ್ಮ ತಾತ ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ-2 ಕ್ರಯ ಪತ್ರ ಆಗುವಾಗ 2, 3 ನೇ ವಾದಿಯರು ಮತ್ತು 2 ರಿಂದ 6 ನೇ ಪ್ರತಿವಾದಿಯರು ಜನಿಸಿರಲಿಲ್ಲ ಎಂದರೆ ಸರಿ. ನಮ್ಮ ತಾತನಿಗೆ ನಮ್ಮ ತಂದೆ ಒಬ್ಬನೇ ಮಗ ಎಂದರೆ ಸರಿ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಯರು ಯಾವಾಗ ಹುಟ್ಟಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. 1 ನೇ ವಾದಿಯು 1946 ಮತ್ತು 1 ನೇ ಪ್ರತಿವಾದಿಯು 1948 ರಲ್ಲಿ ಜನಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ತಾತ ಮತ್ತು 1 ನೇ ಪ್ರತಿವಾದಿಯ ಹೆಸರು ಒಂದೇ ಆಗಿರುತ್ತೆದೆ ಎಂದರೆ ಸರಿ.

5. ನಮ್ಮ ಕುಟುಂಬದಲ್ಲಿ ಯಾರೂ ಸರ್ಕಾರಿ ಅಥವಾ ಖಾಸಗಿ ನೈಕರಿ ಮಾಡಿರುವುದಿಲ್ಲ ಮತ್ತು ಎಲ್ಲರೂ ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.3 ಸ್ವತ್ತನ್ನು 1953 ರಲ್ಲಿ ಖರೀದಿಸುವುದಕ್ಕೂ ಮುಂಚೆ ನಮ್ಮ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿ ಇತ್ತು ಎಂದರೆ ಸರಿ. ನಮ್ಮ ತಂದೆಯೂ ಸಹ ನಮ್ಮ ತಾತ ಮತ್ತು ಅಜ್ಜಿಯ ಜೊತೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ ಆದರೆ ನಮ್ಮ ತಂದೆಯು ವ್ಯಾಪಾರ ಮಾಡುತ್ತಿದ್ದರು. ನಮ್ಮ ತಂದೆಯು ಹುಣಸೆ, ರಾಗಿ, ಬತ್ತ, ಹುರುಳಿ, ಇತ್ಯಾದಿಗಳನ್ನು ಮಾರಾಟ ಮಾಡುತ್ತಿದ್ದರು. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಹೇಳಿದ ಎಲ್ಲಾ ಸಾಮಾಗ್ರಿಗಳನ್ನು ನಮ್ಮ ತಂದೆಯು ನಮ್ಮ ತಾತ ಮತ್ತು ಅಜ್ಜಿಯ ಜೊತೆ ನಮ್ಮ ಪಿತ್ರಾರ್ಜಿತ ಜಮೀನುಗಳಲ್ಲಿಯೇ ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ ಆದರೆ ಬೇರೆ ಕಡೆಯಿಂದ ತಂದು ಮಾರುತ್ತಿದ್ದರು. ನಮ್ಮ ತಂದೆಯು ಯಾರ ಹತ್ತಿರ ಸದರಿ ಸಾಮಾಗ್ರಿಗಳನ್ನು ತರುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ.

6.  ದಾವಾ ಸ್ವತ್ತುಗಳಲ್ಲಿ ಹುಣಸೇ, ಜಾಲಿ, ಬೇವು, ನೀಲಗಿರಿ, ಆಲದ ಮತ್ತು ತೆಂಗಿನ ಮರಗಳು ಇರುತ್ತವೆ ಎಂದರೆ ಸರಿ. ಸದರಿ ತೆಂಗಿನ ಮರಗಳಿಗೆ ಈಗ 30-40 ವರ್ಷ ವಯಸ್ಸು ಆಗಿರುತ್ತವೆ ಮತ್ತು ಅವುಗಳಿಗೆ ಫಲ ಬರುತ್ತಿರುತ್ತದೆ. ನಾವು ಸದರಿ ನೀಲಗಿರಿ ಮರಗಳನ್ನು ಪ್ರತಿ 4 ವರ್ಷಕೊಮ್ಮೆ ಕಟಾವು ಮಾಡುತ್ತಿದ್ದೆವು ಎಂದರೆ ಸರಿ. ಈಗ ಸುಮಾರು 20 ವರ್ಷಗಳಿಂದ ನಾವು ಸದರಿ ನೀಲಗಿರಿ ಮರಗಳನ್ನು ಕಟಾವು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಮರಗಳನ್ನು ಕಟಾವು ಮಾಡುವಾಗ ನಮ್ಮ ತಂದೆಯೇ ಮುಂದೆ ನಿಂತು ಕಟಾವು ಮಾಡಿಸಿ ಅದರಿಂದ ಬಂದ ಹಣವನ್ನು ಅವರೇ ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿ.

7.  ದಾವಾ ಐಟಂ ನಂ.3 ಸ್ವತ್ತನ್ನು ನಿಡಿ-2 ರಡಿಯಲ್ಲಿ 1953 ರಲ್ಲಿ ಖರೀದಿಸಿದಾಗ ಅದರಲ್ಲಿ ಯಾವುದೇ ಬಾವಿ, ಬೋರ್ ವೆಲ್ ಮತ್ತು ವಿದ್ಯುತ್ ಶಕ್ತಿ ಸಂಪರ್ಕ ಇರಲಿಲ್ಲ ಎಂದರೆ ಸರಿ. ದಾವಾ ಐಟಂ ನಂ.2 ಮತ್ತು 10 ರಲ್ಲಿ ಬೋರ್ ವೆಲ್ ಗಳು ಮತ್ತು ಅವುಗಳಿಗೆ ವಿದ್ಯುತ್ ಶಕ್ತಿ ಸಂಪರ್ಕ ಇರುತ್ತವೆ ಎಂದರೆ ಸರಿ. ಸದರಿ ಬೋರ್ ವೆಲ್ ಗಳಿಂದಲೇ ಬೇರೆ ಎಲ್ಲಾ ದಾವಾ ಜಮೀನುಗಳಿಗೆ ನೀರು ಹೋಗುತ್ತಿತ್ತು ಎಂದರೆ ಸರಿಯಲ್ಲ ಆದರೆ ದಾವಾ ಐಟಂ ನಂ.**3** ಜಮೀನಿಗೆ ಮಾತ್ರ ಹೋಗುತ್ತಿತ್ತು. ದಾವಾ ಸ್ವತ್ತುಗಳಲ್ಲಿ ಮತ್ತು ಅವುಗಳಲ್ಲಿರುವ ಬೋರ್ ವೆಲ್ ಹಾಗೂ ಮರಗಳಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಹಕ್ಕು ಇರುತ್ತದೆ ಎಂದರೆ ದಾವಾ ಐಟಂ ನಂ.**3** ಸ್ವತ್ತನ್ನು ಹೊರತು ಪಡಿಸಿ ಉಳಿದೆಲ್ಲಾ ಸ್ವತ್ತುಗಳಲ್ಲಿ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.**3** ಸ್ವತ್ತಿನಲ್ಲಿ ಇರುವ ಬೋರ್ ವೆಲ್ ಇರುವ ವಿದ್ಯುತ್ ಶಕ್ತಿ ಸಂಪರ್ಕ ನಮ್ಮ ತಂದೆ ಚಿಕ್ಕ ತಿಪ್ಪಾರೆಡ್ಡಿ ರವರ ಹೆಸರಿನಲ್ಲಿ ಇರುತ್ತದೆ. ಸಾಕ್ಷಿ ಮುಂದುವರೆದು ಆದರೆ ಅದಕ್ಕೆ ಈಗ ನೀರು ಬರುತ್ತಿಲ್ಲ ಮತ್ತು ಆ ಕಾರಣಕ್ಕಾಗಿ ದಾವಾ ಐಟಂ ನಂ.**2** ಮತ್ತು **10** ಜಮೀನುಗಳಲ್ಲಿ ಅದಕ್ಕೆ ನೀರು ಬರುತ್ತಿರುತ್ತದೆ ಎಂದು ನುಡಿಯುತ್ತಾರೆ.

**8.**  ದಾವಾ ಐಟಂ ನಂ.**3** ಸ್ವತ್ತಿನಲ್ಲಿ ಈಗ ಜೋಳ**,** ರೇಷ್ಮೆ ಮತ್ತು ಹುಲ್ಲು ಇರುತ್ತದೆ. ಅವುಗಳ ಪೈಕಿ ಹೆಚ್ಚಿನ ಪ್ರಮಾಣದಲ್ಲಿ ರೇಷ್ಮೆ ಬೆಳೆ ಇರುತ್ತದೆ. ದಾವಾ ಐಟಂ ನಂ.**3** ಸ್ವತ್ತನ್ನು ಹೊರತು ಪಡಿಸಿ ಬೇರೆ ಎಲ್ಲಾ ದಾವಾ ಸ್ವತ್ತುಗಳ ವರಮಾನವನ್ನು ನಮ್ಮ ತಂದೆಯೇ ತೆಗೆದುಕೊಳ್ಳುತ್ತಿದ್ದರು ಆದರೆ ಅವರು ವ್ಯಾಪಾರಕ್ಕೂ ಸಹ ಹೋಗುತ್ತಿದ್ದರು. ಉಳಿದ ದಾವಾ ಸ್ವತ್ತುಗಳ ಆದಾಯದಿಂದಲೇ ನಮ್ಮ ತಂದೆಯು ದಾವಾ ಐಟಂ ನಂ.**3** ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಪಾಟೀ ಸವಾಲಿನ **2** ನೇ ಪ್ಯಾರಾದಲ್ಲಿ ನಮ್ಮ ತಂದೆಯು **1953** ರಲ್ಲಿ ದಾವಾ ಐಟಂ ನಂ.**3** ಪೈಕಿ **2½** ಜಮೀನನ್ನು ಖರೀದಿಸಿದ ತಮ್ಮೆಗೌಡ ರವರಿಂದ ಸಾಲ ಪಡೆದುಕೊಂಡಿದ್ದರು ಎಂದು ಹೇಳಿದ್ದು ನಮ್ಮ ತಂದೆಯು ರೂ.**400/-** ಗಳ ಸಾಲ ಪಡೆದಿದ್ದರು ಆದರೆ ಈ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಸಾಲವನ್ನು ನಮ್ಮ ತಂದೆಯು ಯಾವಾಗ ತೀರಿಸಿದರು ಎಂದು ನನಗೆ ಗೊತ್ತಿರುವುದಿಲ್ಲ. ಈ ಸಾಲದ ವಿಚಾರವನ್ನು ನಾನು ನನ್ನ ಲಿಖಿತ ಹೇಳಿಕೆಯಲ್ಲಿ

ಹೇಳಿರುತ್ತೇನೆ. ಸಾಕ್ಷಿ ಮುಂದುವರೆದ ನಮ್ಮ ತಂದೆಯು ಸಾಲ ಮಾಡಿ ಮತ್ತು ನಮ್ಮ ತಾಯಿಯ ಒಡವೆಗಳನ್ನು ಮಾರಾಟ ಮಾಡಿ **1953** ಮತ್ತು **1959** ರಲ್ಲಿ ದಾವಾ ಐಟಂ ನಂ.**3** ನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ.

**9.** ನಮ್ಮ ತಂದೆಯ ಬ್ಯಾಂಕ್ ಖಾತೆಯಲ್ಲಿ ದಾವಾ ಐಟಂ ನಂ.**13** ಸ್ವತ್ತು ಅಂದರೆ ರೂ.**1** ಲಕ್ಷದ **30** ಸಾವಿರಗಳು ಇದ್ದವು ಮತ್ತು ಅವರ ಹೆಸರಿನಲ್ಲಿ ರೂ.**69** ಸಾವಿರ ಚಿಲ್ಲರೆ ಮೊತ್ತದ ಎಫ್ ಡಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಚಾರ ನನಗೆ ಚೆನ್ನಾಗಿ ಗೊತ್ತು ಮತ್ತು ಅವುಗಳನ್ನು ನಾನು, **2** ಮತ್ತು **4** ನೇ ಪ್ರತಿವಾದಿಯರೇ ಡ್ರಾ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆಯು **1953** ರಲ್ಲಿ ರೂ.**180/-** ಮತ್ತು **1959** ರಲ್ಲಿ ರೂ.**400/-** ಗಳಿಗೆ ದಾವಾ ಐಟಂ ನಂ.**3** ಸ್ವತ್ತನ್ನು ಖರೀದಿಸಿರುತ್ತಾರೆ. ನಾನು ನಿಡಿ-**2** ಮತ್ತು **3** ಕ್ರಯ ಪತ್ರಗಳನ್ನು ತಿಳಿದುಕೊಂಡಿರುತ್ತೇನೆ. ದಾವಾ ಐಟಂ ನಂ.**3** ಸ್ವತ್ತನ್ನು ನಮ್ಮ ಒಟ್ಟು ಕುಟುಂಬದ ಸಂಪಾದನೆಯಿಂದ ಖರೀದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ನಿಡಿ-**2** ಮತ್ತು **3** ರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ನಮ್ಮ ತಂದೆಯೂ ಸಹ ಅವುಗಳ ಬಗ್ಗೆ ನನಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)

1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ

ಕೆಜಿಎಫ್